**C.W.** 25 **PW** 10

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ**

**ನ್ಯಾಯಾಲಯ, ಕುಮಟಾ**

**ಸಿ.ಸಿ.ನಂ.632/2024**

ಸಿ.ಡಬ್ಲ್ಯು 25

ಪಿ.ಡಬ್ಲ್ಯು 10

| | | |
|---|---|---|
| ಸಾಕ್ಷಿದಾರರ ಹೆಸರು | - | **ತಿಮ್ಮಪ್ಪ ನಾಯ್ಕ** |
| ತಂದೆಯ ಹೆಸರು | - | ವೆಂಕಪ್ಪಾ ನಾಯ್ಕ |
| ವಯಸ್ಸು | - | 52 ವರ್ಷ |
| ಉದ್ಯೋಗ | - | ವೃತ್ತ ನಿರೀಕ್ಷಕರು, ಸುಳ್ಯ ಪೊಲೀಸ ಠಾಣೆ |
| ವಾಸ್ತವ್ಯ | - | ಸುಳ್ಯ |

(ಇಂದು ದಿನಾಂಕ 07-**02-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ -ಮಾನ್ಯ ಸ.ಸ.ಅ. ರವರಿಂದ**

ನಾನು 2022 ರ ಜನವೇರಿ ಯಿಂದ 2024 ಸೆಪ್ಟೆಂಬರ ವರೆಗೆ ಕುಮಟಾ ಪೊಲೀಸ್ ಠಾಣೆಯಲ್ಲಿ ಪೊಲೀಸ ನಿರೀಕ್ಷಕನಾಗಿ ಕರ್ತವ್ಯನಿರ್ವಹಿಸಿದ್ದೇನೆ.

ದಿನಾಂಕ 04-12-2023 ರಂದು ನಾನು ಪ್ರಕಣದ ಕಡತವನ್ನು ಚಾಸಾ 24 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರಿಸಿ ಚಾಸಾ 9 ರಿಂದ 24 ರವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಚಾಸಾ 4 ರಿಂದ 6 ರವರ ಸಿಡಿಆರ ಹಾಗೂ ಕ್ಯಾಪ್ ನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

1 ರಿಂದ 3ನೇ ಆರೋಪಿತರ ಸಿಡಿಆರ್ ಹಾಗೂ ಕ್ಯಾಪ್ ನ್ನು ಪಡದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿನಾಂಕಃ 18/12/2023 ರಂದು ಘಟನಾ ನಡೆದ ಸ್ಥಳದ ಪಹಣಿ ಪತ್ರಿಕೆಯನ್ನು ಪೂರೈಸುವಂತೆ ಚಾಸಾ 21 ರವರಿಗೆ ಕೋರಿಕೆ ಪತ್ರವನ್ನು ನೀಡಿದ್ದು, ದಿಃ 07/02/2024 ರಂದು ಪಹಣಿ ಪತ್ರಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದ್ರಿ ದಾಖಲಾತಿಗಳು ಒಟ್ಟಾಗಿ ನಿಪಿ10, ಸಾಕ್ಷಿಯ ಸಹಿಯು ನಿಪಿ10ಎ ಎಂದು ಗುರುತಿಸಲಾಯಿತು.

ಚಾಸಾ 19 ರವರಿಗೆ ತನಿಖೆಗೆ ಸಹಕರಿಸುವಂತೆ ನೋಟೀಸನ್ನು ನೀಡಿರುತ್ತೇನೆ ಹಾಗೂ ಉಪ ನಿರ್ದೇಶಕರು ಪ್ರವಾಸೋಧ್ಯಮ ಇಲಾಖೆಗೆ ಘಟನಾ ಸ್ಥಳದಲ್ಲಿ ರೆಸಾರ್ಟನ್ನು ನಡೆಸಲು ಅನುಮತಿ ಇದೆಯೋ ಎಂಬ ಕುರಿತಾಗಿ ಪ್ರವಾಸೋಧ್ಯಮ ಇಲಾಖೆ ನಿವೇದನೆಯನ್ನು ಮಾಡಿಕೊಂಡಿದ್ದು, ಅವರು ದಿನಾಂಕಃ 28/12/2023 ರಂದು ವರದಿಯನ್ನು ನೀಡಿರುತ್ತಾರೆ. ಸದ್ರಿ ದಾಖಲಾತಿಯನ್ನು ನಿಪಿ 11 ಎಂದು, ಸಾಕ್ಷಿಯ ಸಹಿಯನ್ನು ನಿಪಿ11 ಎ ಎಂದು ಗುರುತಿಸಲಾಯಿತು.

ದಿನಾಂಕಃ 28/12/2023 ರಂದು ಚಾಸಾ 19 ರವರು ಠಾಣೆಗೆ ಹಾಜರಾಗಿ ಘಟನಾ ಸ್ಥಳಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ನೀಡಿರುತ್ತಾರೆ. ನಂತರ ಅವರನ್ನು ವಿಚಾರಿಸಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ದಿನಾಂಕಃ 11/01/2024 ರಂದು ಈ ಪ್ರಕಣದಲ್ಲಿ ವಶಪಡಿಸಿಕೊಂಡ ಇನ್ನೋವಾ ವಾಹನ ಹಾಗೂ ಓಪೋ ಮೊಬೈಲನ್ನು 1ನೇ ಆರೋಪಿಗೆ ಮಾನ್ಯ ನ್ಯಾಯಾಲಯದ ಆದೇಶದಂತೆ ಬಿಟ್ಟುಕೊಟ್ಟಿರುತ್ತೇನೆ.

ದಿನಾಂಕಃ 12/01/2024 ರಂದು 2ನೇ ಆರೋಪಿತಳನ್ನು ಮಾನ್ಯ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ನನ್ನ ಮುಂದೆ ಹಾಜರ ಆಗಿದ್ದು ಆಕೆಯನ್ನು ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಗೊಳಿಸಿರುತ್ತೇನೆ.

ದಿನಾಂಕಃ 02/04/2024 ರಂದು ಈ ಪ್ರಕರಣದಲ್ಲಿ ಭಾವಚಿತ್ರ ತೆಗೆದು ಚಾಸಾ 16 ರವರಿಂದ 65 ಬ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದ್ರಿ ದಾಖಲಾತಿಯನ್ನು **ನಿಪಿ12** ಎಂದು, ಸಾಕ್ಷಿಯ ಸಹಿಯನ್ನು **ನಿಪಿ12ಎ** ಎಂದು ಗುರುತಿಸಲಾಯಿತು.

ತನಿಖೆಯಲ್ಲಿ ಆರೋಪಿತರ ಮೇಲೆ ಸಾಕಷ್ಟು ಸಾಕ್ಷ್ಯಾಧಾರಗಳು ಲಭ್ಯವಾಗುವುದರಿಂದ ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲು – ಆರೋಪಿ ಪರ ಶ್ರೀ.ಎಸ್.ಜೆ.ಎನ್. ವಕೀಲರಿಂದ**

ಚಾಸಾ 9 ರಿಂದ 24 ರವರು ನನ್ನ ಅಧೀನ ಸಿಬ್ಬಂದಿ ಎಂದರೆ ಸರಿ. ನಾನು ಕೇಳಿದಂತೆ ಅವರು ಹೇಳಿಕೆಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ10 ನ್ನು ನಾನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ 11 ರವರು ಕಾಮತ್ ಫಾರ್ಮ ಹೌಸ್ ಗೆ ಅನುಮತಿ ಪಡೆದುಕೊಂಡಿಲ್ಲ ಎಂದು ವರದಿಯನ್ನು ನೀಡಿರುತ್ತಾರೆ ಎಂದರೆ ಸರಿ. ಚಾಸಾ 19 ರವರ ವಿರುದ್ಧ ಯಾವುದೇ ಪ್ರಕರಣವನ್ನು ನಿಪಿ11 ರ ಆಧಾರದ ಮೇಲೆ ದಾಖಲಿಸಿಕೊಂಡಿಲ್ಲ. ನ್ಯಾಯಾಲಯದಲ್ಲಿ ನಿಶಾನೀಕರಿಕೊಂಡ ಎಲ್ಲಾ ದಾಖಲಾತಿಗಳನ್ನು ನಾನು ಸೃಷ್ಟಿ ಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಚಾಸ 4 ರಿಂದ 6 ರವರಿಗೆ ಹಾಗೂ ಆರೋಪಿತರಿಗೆ ಸಂಬಂಧಿಸಿದ ಯಾವುದೆ ಸಿಡಿಆರ ನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

ಗೋಕರ್ಣ ಎಂಬುವುದು ಪ್ರವಾಸಿ ತಾಣ ಎಂದರೆ ಸರಿ. ಈ ಪ್ರಕರಣವನ್ನು ನಾನು ಠಾಣಾ ಅಂಕಿ ಸಂಖ್ಯೆಗಾಗಿ ದಾಖಲಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ, ನಾನು ನನ್ನ ಮುಖ್ಯ ವಿಚಾರಣೆಗೆ ಹೇಳಿದಂತೆ ಯಾವುದೇ ಘಟನೆ ನಡೆಯಲಿಲ್ಲ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿ ಕುಳಿತುಕೊಂಡು ಸುಳ್ಳು ಪ್ರಕರಣವನ್ನು ದಾಖಲಿಸಿದ್ದು ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 10 ರಿಂದ 12 ಕ್ಕೆ ನಾನು ಈ ಪ್ರಕರಣಕ್ಕೆ ಪೂರಕವಾಗಿ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಚಾಸಾ 1 ರವರು ದಾಳಿಯ ಪೂರ್ವದಲ್ಲಿ ಶೋಧನಾ ಸಮುಚ್ಚಿತ ವಾರಂಟನ್ನು ತಯಾರಿಸಿದ ಕುರಿತಾಗಿ ಅವರಿಂದ ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿಲ್ಲ. ಚಾಸಾ 9 ರಿಂದ 18 ರವರು ಠಾಣೆಯಲ್ಲಿ ದಾಳಿ ನಡೆದಿದೆ ಎನ್ನಲಾದ ದಿನ ಆ ಸಮಯದಲ್ಲಿ ಕರ್ತವ್ಯದಲ್ಲಿ ಇದ್ದರು ಎಂಬ ಬಗ್ಗೆ ಎಸ್.ಎಚ್.ಡಿ ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಘಟನಾ ಸ್ಥಳದಲ್ಲಿ ಸಿ.ಸಿ.ಟಿ.ವಿ. ಇರಲಿಲ್ಲ. ಕಾಮತ್ ಫಾರ್ಮ ಹೌಸ ಆಸ್ತಿತ್ವದಲ್ಲಿ ಇರುವ ಕುರಿತಾಗಿ ನನ್ನ ತನಿಖೆಯ ಕಾಲದಲ್ಲಿ ಸ್ಥಳಕ್ಕೆ ಭೇಟ್ಟಿಯನ್ನು ನೀಡಿ ಯಾವುದೇ ಭಾವಚಿತ್ರವನ್ನು ತೆಗೆದಿರುವುದಿಲ್ಲ.

ನಾನು ತನಿಖೆಯ ಕಾಲದಲ್ಲಿ ಪಡೆದುಕೊಂಡ ಪಹಣಿ ಪತ್ರಿಕೆಯಲ್ಲಿ ಬಹಳಷ್ಟು ಜನರ ಹೆಸರು ಇರುವುದು ನನ್ನ ತನಿಖೆಯ ಕಾಲದಲ್ಲಿ ಕಂಡು ಬಂದಿರುತ್ತದೆ. ಅವರಿಗೆ ನೋಟೀಸನು ನೀಡಿರುವುದಿಲ್ಲ. ನಿ.ಪಿ.10 ರಲ್ಲಿ ಕಾಮತ್ ಫಾರ್ಮ ಹೌಸನ ಆಸ್ತಿತ್ವದ ಕುರಿತಾಗಿ ಉಲ್ಲೇಖ ಇಲ್ಲ ಎಂದರೆ ಸರಿ. 3ನೇ ಆರೋಪಿತನಿಗೆ ಹಾಗೂ ಕಾಮತ್ ಫಾರ್ಮ ಹೌಸಗೆ ಇರುವ ಸಂಬಂಧದ ಕುರಿತಾಗಿ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಮ್ಮ ಠಾಣೆಯ ಒಳಗೆ ಬಂಗಾಳಿ ಭಾಷೆ ಬರುವಂತಹ ಸಿಬ್ಬಂದಿಗಳು ಇರುವುದಿಲ್ಲ. ಚಾಸಾ 1 ಹಾಗೂ ನಾನು ಸಮಾನ ದರ್ಜೆಯ ಅಧಿಕಾರಿಯಾಗಿರುವುದರಿಂದ ಸುಳ್ಳು ದೋಷಾರೋಪಣಾ

ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಪರಸ್ಪರ ಪರಿಚಯ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿದಂತಹ ಅಪರಾಧವನ್ನು ಮಾಡಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಪ್ರ.ದ.ನ್ಯಾ.ದಂ. ಕುಮಟಾ